''ಸರ್, ನನಗೆ ಗೊತ್ತಿರುವ ಒಂದಿಬ್ಬರು ಪತ್ರಕರ್ತರನ್ನು ಮಾತಾಡಿಸಿ ಬಾಯಿ ಬಿಡಿಸುತ್ತೇನೆ... ಅವರಿಂದ ಏನಾದರೂ ಸಿಗಬಹುದು..." ಗಂಗಾಧರನ ಧ್ವನಿಯಲ್ಲಿ ಉತ್ಸಾಹ ಪುಟಿಯುತ್ತಿತ್ತು.

"ಯಾರಾದರೂ ಒಬ್ಬರು ಸಾಕು, ತುಂಬಾ ಜನ ಬೇಡ. ಹಾಂ... ಈ ವಿಚಾರ ನಮ್ಮಲ್ಲಿಯೇ ಇರಲಿ... ಅರ್ಥ ಆಯಿತಾ?" ಎಂದು ಶಿವಣ್ಣ ಹೇಳಿದ್ದಕ್ಕೆ ಗಂಗಾಧರ ತಲೆ ಆಡಿಸಿದ. ಅದೆಲ್ಲೋ ಅಡಿಗಿ ಕುಳಿತ ರಹಸ್ಯ ಹೊರತರುವ ಪ್ರಯತ್ನಕ್ಕೆ ಅವರು ಕೈ ಹಾಕಿದ್ದರು.

ಒಂದು ಕ್ಷಣ ಕೂಡಾ ತಡ ಮಾಡದೇ ಗಂಗಾಧರ ಅಲ್ಲಿಯೇ ತನ್ನ ಪರಿಚಯದ ಪತ್ರಕರ್ತ ಸುನಿಲ್‌ಗೆ ಫೋನಾಯಿಸಿದ. "ಸುನಿಲ್, ನಿಮ್ಮ ಚಾನೆಲ್‌ಗೆ ಅಂದು ಗೃಹ ಕಾರ್ಯದರ್ಶಿಗಳು ನಮ್ಮ ಸ್ಟೇಶನ್‌ಗೆ ಕಂಪ್ಲೇಂಟ್ ಕೊಡಲು ಬರಲಿದ್ದಾರೆ ಎಂದು ಹೇಗೆ ತಿಳಿಯಿತು? ಅದೂ ಅಷ್ಟು ಬೆಳಗ್ಗೇನೇ?" ಅವನ ಮಾತುಗಳಿಂದ ಸುನಿಲ್‌ನಲ್ಲಿದ್ದ ಪತ್ರಕರ್ತ ಜಾಗೃತಗೊಂಡ. "ನನಗೂ ಅದೇ ಆಶ್ಚರ್ಯ ಸಾರ್... ಯಾವುದೋ ಅನಾಮಧೇಯ ಕರೆ ಸುಮಾರು ಬೆಳಗ್ಗೆ ನಾಲ್ಕು ಗಂಟೆಗೆ ನನ್ನ ಮೊಬೈಲ್‌ಗೆ ಬಂತು ಸಾರ್. ಗೃಹ ಕಾರ್ಯದರ್ಶಿಯವರ ಡ್ರೈವರ್ ಫೋನ್ ಮಾಡಿ ಬ್ಲಾಕ್‌ಮೇಲ್ ಮಾಡುತ್ತಿದ್ದಾನೆ. ಅದರ ಸಲುವಾಗಿ ಅವರೇ ದೂರು ಕೊಡಲು ಸ್ಟೇಷನ್‌ಗೆ ಹೋಗುತ್ತಿದ್ದಾರೆ ಅಂತ. ನಾನೇನೋ ಎಕ್ಸ್‌ಕ್ಲೂಸಿವ್ ಸುದ್ದಿ ಅಂತಾ ಬಂದರೆ ಇಲ್ಲಿ ಎಲ್ಲಾ ಚಾನೆಲ್‌ರವರ ಜಾತ್ರೇನೇ ನೆರೆದಿತ್ತು. ಎಲ್ಲರಿಗೂ ಅದೇ ಅನಾಮಧೇಯ ಕರೆ. ಕನ್ಫರ್ಮ್ ಮಾಡಿಕೊಳ್ಳಲಿಕ್ಕೆ ಅವರ ಮನೆಗೆ ಫೋನ್ ಮಾಡಿ ಎಂದು ಹೇಳಿದ್ದ. ಪ್ರತಿಯೊಬ್ಬರೂ ಫೋನ್ ಮಾಡಿದ್ದಾರೆ. ಎಲ್ಲರಿಗೂ ಸುಬ್ರಮಣ್ಯಪುರ ಪೊಲೀಸ್ ಸ್ಟೇಶನ್ ಅಂತ ಹೇಳಿದ್ದಾರೆ ಅವರ ಮನೆಯವರು...''

ಗಂಗಾಧರ ಮಾತಾಡಲಿಲ್ಲ. ಅವನಿಗೆ ಗೊತ್ತು, ಕೆಲವು ಸಲ ಮೌನ ಬಹಳಷ್ಟು ಸತ್ಯ ಹೊರಗೆಳೆಯುತ್ತದೆ ಅಂತ.

"ಈಗ ಯಾಕೆ ಸಾರ್... ಕೇಸ್ ಕ್ಲೋಸ್ ಆಯಿತಲ್ಲವೇ... ಏನಾದರೂ ಎಕ್ಸ್‌ಕ್ಲೂಸಿವ್ ಸುದ್ದಿ ಇದ್ದರೆ ಕೊಡಿ ಸಾರ್, ಬದುಕಿಕೊಳ್ತೀವಿ..." ಇಪ್ಪತ್ತನಾಲ್ಕು ಗಂಟೆ ಟಿಆರ್‌ಪಿಯ ಹಿಂದೆ ಬಿದ್ದು ಒದ್ದಾಡುತ್ತಿದ್ದ ಸುನಿಲ್‌ಗೆ ಗಂಗಾಧರನ ಪ್ರಶ್ನೆ ಹೊಸ ಬೆಳಕು ಕಾಣಿಸಿತು.

"ಆ ಡ್ರೈವರೇ ನಮಗೆಲ್ಲಾ ಫೋನ್ ಮಾಡಿರಬೇಕು ಅಲ್ಲವಾ ಸಾರ್... ಎಲ್ಲ ಪತ್ರಕರ್ತರೂ ಹಾಗೇ ಹೇಳುತ್ತಿದ್ದರು" ಎಂದ ಸುನಿಲ್. ಮಾತು ಮುಂದುವರೆಸುವುದು ಗಂಗಾಧರನಿಗೆ ಬೇಕಿರದಿದ್ದರೂ ಸುನಿಲ್‌ಗೆ ಬೇಕಿತ್ತು. ಅದು ಸುದ್ದಿಯ ಅನಿವಾರ್ಯತೆ!

ಸ್ಪೀಕರ್ ಫೋನ್‌ನಲ್ಲಿ ಮಾತನಾಡುತ್ತಿದ್ದುದರಿಂದ ಅವರ ಮಾತುಗಳನ್ನೆಲ್ಲಾ ಕೇಳಿಸಿಕೊಳ್ಳುತ್ತಿದ್ದ ಎಸಿಪಿ ಶಿವಣ್ಣ ತಾನ್ಯಾರೆಂದು ಹೇಳದೇ, "ಆ ಡ್ರೈವರ್‌ಗೆ ನಿಮ್ಮೆಲ್ಲರ ನಂಬರ್ ಹೇಗೆ ಸಿಕ್ಕಿತು? ಹದಿಮೂರು ನ್ಯೂಸ್ ಚಾನೆಲ್‌ಗಳ ಪ್ರಮುಖ ಪತ್ರಕರ್ತರ ನಂಬರ್ ಪಡೆದು ಅಷ್ಟು ಹೊತ್ತಿಗೇ ಫೋನ್ ಮಾಡಿದ್ದಾನೆ ಅಂದರೆ ಮೊದಲೇ ಪ್ಲಾನ್ ಮಾಡಿರಬಹುದಲ್ಲವೇ?"

ಸುನಿಲ್ ಜಾಗೃತನಾದ. "ಹೌದಲ್ಲವಾ ಸಾರ್, ನಾನು ಈ ದೃಷ್ಟಿಯಿಂದ ಯೋಚನೆಯನ್ನೇ ಮಾಡಿರಲಿಲ್ಲ. ಅಂದರೆ ನಿಮ್ಮ ಅರ್ಥ... ಆ ಫೋನ್‌ಕಾಲ್ ಅಥವಾ ಗೃಹ ಕಾರ್ಯದರ್ಶಿಗಳು ಖುದ್ದಾಗಿ ಠಾಣೆಗೆ ಬಂದು ಕಂಪ್ಲೇಂಟ್ ಕೊಟ್ಟಿದ್ದು, ಎಲ್ಲಾ ಪ್ರೀ ಪ್ಲಾನ್ಡ್ ಅಂತೀರಾ?''

ಇನ್ನು ಹೆಚ್ಚು ಮಾತನಾಡಿದರೆ, ಇದನ್ನೇ 'ಬ್ರೇಕಿಂಗ್ ನ್ಯೂಸ್' ಎಂದು ಚಾನೆಲ್‌ನಲ್ಲಿ ತೋರಿಸಿಬಿಟ್ಟಾನು. ಅದರಿಂದ ತಮ್ಮ ತನಿಖೆಗೆ ತೊಂದರೆ ಆದೀತು ಎಂದು ಮಾತುಕತೆ ಮುಗಿಸಲು ಯೋಚಿಸಿ– "ಸುನಿಲ್ ನಾವು ಮಾತಾಡಿದ್ದು ಆಫ್ ದಿ ರೆಕಾರ್ಡ್. ಯಾವುದೇ ವಿಚಾರ ಹೊರಬರಬಾರದು, ನಾವು ಹೇಳುವವರೆಗೂ. ಐ ಪ್ರಾಮಿಸ್. ನಿಮಗೇ ಎಕ್ಸ್‌ಕ್ಲೂಸಿವ್ ಸುದ್ದಿ